


**ಚಿತ್ರರಂಗದ ಸ್ಥಿತಿಗೆ ಕನ್ನಡಿ**

'ಸ್ಯಾಂಡಲ್‌ವುಡ್ ಸಂಕಟ' ಬಿ.ಎಂ.ಹನೀಫ್ ಅವರ ಮುಖಪುಟ ಲೇಖನ ಇಂದಿನ ಕನ್ನಡ ಚಿತ್ರರಂಗದ ಸ್ಥಿತಿಗೆ ಕನ್ನಡಿ ಹಿಡಿದಿದೆ. ಚುಚ್ಚುಮದ್ದು ನೀಡುವ ಕೆಲಸ ಮಾಡಿದೆ.

-ಕಾಡನೂರು ರಾಮಶೇಷ, ಹುಲಿಮಂಗಲ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಕೊ.ಸು.ನರಸಿಂಹಮೂರ್ತಿ, ಮೈಸೂರು/ ಪಿ.ಗೋವಿಂದರಾಜ್, ಶಿವಮೊಗ್ಗ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

**ಪಾಪದ ಹಣ- ಗುಣಮಟ್ಟ ಎಲ್ಲಿಯದು?**

ರಿಯಲ್ ಎಸ್ಟೇಟ್ ಹಾಗೂ ರಾಜಕೀಯ ಭ್ರಷ್ಟಾಚಾರದಿಂದ ಗಳಿಸಿದ ಪಾಪದ ಹಣದಿಂದ, ತಮ್ಮ ಸಂಬಂಧಿಗಳು ಅಥವಾ ಪುತ್ರರನ್ನು ನಾಯಕರಾಗಿಸಿಕೊಂಡು ತೆಗೆಯುವ ಸಿನಿಮಾಗಳಲ್ಲಿ ಗುಣಮಟ್ಟ ನಿರೀಕ್ಷಿಸುವುದೇ ತಪ್ಪು. ಇಂತಹ ದರಿದ್ರ ಸಿನಿಮಾಗಳನ್ನು ಹಣಕೊಟ್ಟು ನೋಡಲು ಪ್ರೇಕ್ಷಕರು ಹುಚ್ಚರೆ?

-ಶಿವಪ್ರಕಾಶ್ ಭೋಗಣ್ಣ, ಬಳ್ಳಾರಿ ಮಧ್ವರಾಜ್, ಬೆಂಗಳೂರು

**ಸಿನಿಮಾದವರಿಗೆ ಬಿಟ್ಟಿ ಪ್ರಚಾರ!**

ಸ್ಯಾಂಡಲ್‌ವುಡ್ ಮಂದಿ ವಿವಾದಗಳನ್ನು ಬಿಟ್ಟಿ ಪ್ರಚಾರದ ಸಾಧನಗಳನ್ನಾಗಿ ಬಳಸಿಕೊಳ್ಳಲು ಆರಂಭಿಸಿದ್ದಾರೆ. ರಮ್ಯಾ-ಗಣೇಶ್ ವಿವಾದವೇ ಇದಕ್ಕೆ ಸಾಕ್ಷಿ. ಎಲ್ಲಿಯವರೆಗೆ ಮಾಧ್ಯಮಗಳು ಚಿತ್ರ ತಾರೆಯರನ್ನು ವೈಭವೀಕರಿಸುವುದನ್ನು ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೆ ಇಂತಹ ಪ್ರಕರಣಗಳಿಗೆ ಕೊನೆ ಹಾಡಲು ಸಾಧ್ಯವಿಲ್ಲ.

-ದೀಪಕ್, ಕಂಬದಕೋಣೆ

**ಮನಸೆಳೆದ ಕಥೆ**

ಎಫ್.ಎಂ.ನಂದಗಾವ ಅವರ 'ಸಂತ ಫಿಲೋಮಿನಾ ಮತ್ತು ಪರದೇಶಪ್ಪನ ಗದ್ದುಗೆ' ಕತೆ ಐತಿಹಾಸಿಕ ಹಿನ್ನೆಲೆಯಿಂದಾಗಿ ಮನ ಸೆಳೆಯಿತು. ಇತ್ತೀಚೆಗೆ ಚಿತ್ರದುರ್ಗಕ್ಕೆ ಭೇಟಿ ಇತ್ತಾಗ ಈ ವಿಷಯ ತಿಳಿದಿರಲಿಲ್ಲವಲ್ಲ ಎಂದು ಬೇಸರವಾಯಿತು.

-ತರಂಗಿಣಿ, ತುಮಕೂರು

**ಮಿಂಚಿನ ಅನಾವರಣ**

'ಇದೆಲ್ಲಾ ಐಪಿಎಲ್ ಮಾಯೆ' ಕೆ. ಓಂಕಾರಮೂರ್ತಿ ಬರಹವು ಮಿಂಚಿನ ಅನಾವರಣ ಮಾಡಿತ್ತು.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

**ಒಳ್ಳೆಯ ವಿಚಾರ ಲಹರಿ**

'ತ್ಯಾಗ ಮತ್ತು ಭೋಗ' ವಿಚಾರ ಲಹರಿಯಲ್ಲಿ ವೈನತೇಯ ಅವರು ಚೆನ್ನಾಗಿ ವಿವರಿಸಿದ್ದಾರೆ.

-ಟಿ.ಎನ್.ಸರಸ್ವತಿ, ತಿಪಟೂರು/ ಶಂಕರೇಗೌಡ ತುಂಬಕೆರೆ, ಮಂಡ್ಯ/ ಕೊಹಿಮ, ಬಸರಕೋಡು

**ಸಕ್ಕರೆ ಕಾಯಿಲೆಗೆ ಮದ್ದು**

'ಮೆಂತೆ ಇರಲು ಚಿಂತೆ ಏಕೆ' ಎಂಬ ಬರಹದಲ್ಲಿ ಡಾ.ಬ್ರಹ್ಮಾನಂದ ನಾಯಕ ಅವರು ಸಕ್ಕರೆ ಕಾಯಿಲೆಗೆ ಉತ್ತಮ ಸಲಹೆ ನೀಡಿದ್ದಾರೆ.

-ಬಿ.ಎಸ್.ಮುಳ್ಳೂರ, ಹಲಗತ್ತಿ/ ಲಕ್ಷ್ಮಣರಾವ್ ಪಾಟೀಲ ಕುಲಕರ್ಣಿ, ಹುಬ್ಬಳ್ಳಿ

**ನಡೆ ನುಡಿಯ ಮಾದರಿ**

ಪ್ರಾಣಿಶಾಸ್ತ್ರ ಅಧ್ಯಯನ ಮಾಡಿರುವ ಹುನಗುಂದದ ಜಗದೀಶ ಚಿತ್ತರಗಿ ಯವರು ಉರಗ ರಕ್ಷಣೆಗೆ ನಿಂತಿರುವುದು ಸ್ವಾಗತಾರ್ಹ. ಅಧ್ಯಯನ ಮತ್ತು ಬದುಕು ಎರಡೂ ಬೇರೆಯಲ್ಲ ಎಂಬುದಕ್ಕೆ ಮಾದರಿಯಾಗಿರುವ ಇವರ ಕುರಿತು ಎಸ್ಕೆ ಕೊನೆಸಾಗರ ಚಿಕ್ಕ- ಚೊಕ್ಕದಾಗಿ ಬರೆದಿದ್ದಾರೆ.

-ಎಸ್. ನವೀನ್, ಅರಸಿಕೆರೆ (ಹರಪನಹಳ್ಳಿ ತಾ.)

**ಬದಲಾದ ವೈ-ಚಾರಿ: ಸ್ವಾಗತ**

ತನು ಮನದಲ್ಲಿ ವೈ-ಚಾರಿಯವರ ಲೇಖನ 'ಎಲ್ಲಿಗೆ ಪಯಣ...' ಉತ್ತಮವಾಗಿ ಮೂಡಿಬಂದಿದೆ. ಇತ್ತೀಚಿನವರೆಗೂ ತಮ್ಮ ನಂಬಿಕೆಯನ್ನು ಓದುಗರ ಮೇಲೆ ಹೇರುತ್ತಿದ್ದ ವೈ-ಚಾರಿಯವರು ಈಗ ಬದಲಾಗಿರುವುದು ಸಂತೋಷದ ವಿಷಯ!

-ಕೆ. ಪ್ರಕಾಶ್, ಚಿಕ್ಕಜೋಗಿಹಳ್ಳಿ

**ಸುಧಾ ಎಂದಿಗೂ ನಂ. 1**

'ಸುಧಾ' ನಂಬರ್ ವನ್ ಅಲ್ಲ ಅಂತ ಕಲ್ಪಿಸಿಕೊಳ್ಳುವುದಕ್ಕೆ ಇಷ್ಟವಿಲ್ಲ. ಬೇರೆ ಎಲ್ಲಾ ವಾರಪತ್ರಿಕೆಗಳಲ್ಲಿ ನಾಲ್ಕು ಧಾರಾವಾಹಿ, ಎರಡರಿಂದ ನಾಲ್ಕು ಕಥೆಗಳು ಪ್ರಕಟವಾಗುತ್ತವೆ. ನಮ್ಮ 'ಸುಧಾ'ದಲ್ಲಿ ಮಾತ್ರ ಈಗ ಒಂದೇ ಧಾರಾವಾಹಿ, ಒಂದೇ ಕಥೆ- ಯಾಕೆ ಸ್ವಾಮಿ? ನಮ್ಮಂತಹ ಗೃಹಿಣಿಯರಿಗೆ ಅದೇ ಆಕರ್ಷಣೆ.

ಎಚ್ಚೆಸ್ಕೆ, ಹಾಮಾನಾ ಇದ್ದಾಗ ಎಷ್ಟು ಚೆನ್ನಾಗಿತ್ತು. ಅವರ ಬರಹ ಓದುತ್ತಿದ್ದೆವು ಎಂದು ಒಮ್ಮೊಮ್ಮೆ ಅನಿಸುತ್ತದೆ. ಏನೇ ಆದರೂ 'ಸುಧಾ' ನಮ್ಮ ಮನೆಗೆ ಬರುವುದನ್ನು ನಿಲ್ಲಿಸುವುದಕ್ಕೆ ಆಗ್ತಾ ಇಲ್ಲ. ಅವಳ ಸೆಳೆತ ಅಂತಹದ್ದು.

-ಆಶಾ ಯಲಹಂಕ, ಬೆಂಗಳೂರು

**ರತ್ನಗರ್ಭ ವಸುಂಧರಾ**


ಪ್ರಿಯ ಗೆಳತಿ 'ಸುಧಾ' ಓದುಗರು ಹೆಚ್ಚಾಗಿದ್ದಕ್ಕೆ ನೀನು ನಮಗೆ ಥ್ಯಾಂಕ್ಸ್ ಹೇಳಿದ್ದೀಯಾ. ಬೇಡ, ನಾನೇ ನಿನಗೆ ಥ್ಯಾಂಕ್ಸ್ ಹೇಳುತ್ತೇನೆ. ಏಕೆಂದರೆ ನಿನ್ನಿಂದ ನಾನು ಕಲಿತಿರುವುದೆಷ್ಟು? ತಿಳಿದಿರುವು ದೆಷ್ಟು? ಹೇಳಲು ಸಾಧ್ಯವಿಲ್ಲ. ನೀನು ರತ್ನಗರ್ಭ ವಸುಂಧರಾ. ತಿಳಿದಷ್ಟು ತಿಳಿಯಬೇಕೆನ್ನಿಸುತ್ತದೆ.

-ಟಿ. ಸುಕನ್ಯಾ, ಚನ್ನಪಟ್ಟಣ

**ಓದುಗರ ಸಂಖ್ಯೆ ಏರಿಕೆ-ಸಂತಸ**

'ಸುಧಾ' ಓದುಗರ ಸಂಖ್ಯೆ 4.40 ಲಕ್ಷ ಮುಟ್ಟಿದ್ದು ತಿಳಿದು ಸಂತಸವಾಗಿದೆ. ನನ್ನ ಅನೇಕ ಲೇಖನಗಳನ್ನು ಪ್ರಕಟಿಸಿ, 'ಸುಧಾ' ನೀಡಿದ ಪ್ರೋತ್ಸಾಹಕ್ಕೆ ಕೃತಜ್ಞತೆಗಳು.

-ಸದಾನಂದ ಹೆಗಡೆಕಟ್ಟೆ, ಮೂಡುಬಿದಿರೆ

**ಕೇರಳದ ಮಾಂತ್ರಿಕ ಜ್ಯೋತಿಷ್ಯರು**

**ಕೇರಳದ ಮಳಿಯಾಳಿ ಕುಟ್ಟಿಚ್ಚಾತನ್‌ನಿಂದ ಶೀಘ್ರ ಪರಿಹಾರವಿದೆ.**

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಲ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974
ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.